

ಮುಂತಾಗಿ ಹೇಳಿದನಂತೆ. ಅವರೆಲ್ಲ ಅವಾಕ್ಕಾದರಂತೆ. ಮರುದಿನ ಬೆಳಿಗ್ಗೆ ವೈದ್ಯರು ನನಗೆ ಫೋನ್ ಮಾಡಿ, 'ನಿಮಗೆ ಅಭಿನಂದನೆ ಕಂಜರ್ಪಣೆಯವರೇ, ನಿಮ್ಮ ಮಗ ಎಂಬುದನ್ನು ತೋರಿಸಿಕೊಟ್ಟ, ಇಡೀ ಭಾರತದ ಭವಿಷ್ಯದ ಭರವಸೆ ಆ ಹುಡುಗ ನೀಡಿದ' ಎಂದರು. 2003ರ ಜುಲೈ 5ರ ಪತ್ರದಲ್ಲಿ 'ಮೊನ್ನೆ ಅಭಿಷೇಕ ಬಂದಿದ್ದ. ಹರಟೆ ಹೊಡೆದು ಹೋದ' ಎಂದು ಬರೆದಿದ್ದರು. ಅದೇ ಪ್ರಾಯಃ ಅವರು ಅವನನ್ನು ಭೇಟಿಯಾದದ್ದು. ಜುಲೈ 5ರಂದೇ ನನ್ನ ಮಗ ಬೆಂಗಳೂರಿನ ರಸ್ತೆ ಅಪಘಾತದಲ್ಲಿ ಅಸುನೀಗಿದ್ದ. ವೈದ್ಯರು ಬರೆದ ಪತ್ರ ಜುಲೈ 9ರಂದು ತಲುಪಿತ್ತು!

ಅವರ ಎಲ್ಲ ಕೃತಿಗಳೂ ನನ್ನಲ್ಲಿದ್ದವು. ಒಂದರ ಹೊರತಾಗಿ: ಅವರ ಬಗ್ಗೆ ನವಕರ್ನಾಟಕದವರು ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಸಾಹಿತಿಗಳ ಪುಸ್ತಕಮಾಲೆಯಲ್ಲಿ ಪ್ರಕಟಿಸಿದ ಒಂದು ಕೃತಿ ಮಾತ್ರ ನನಗ್ಯಾಕೋ ಸಿಕ್ಕಲಿಲ್ಲ. ತರಿಸುವುದಕ್ಕೆ ನನಗೂ ವ್ಯವಧಾನವಾಗಲಿಲ್ಲ. ಈಗೆರಡು ವರ್ಷಗಳ ಹಿಂದೆ ವೈದ್ಯರು ಫೋನ್ ಮಾಡಿ, ಆ ಕೃತಿಯ ಬಗ್ಗೆ ಸಮಾಧಾನವನ್ನು ವ್ಯಕ್ತಪಡಿಸಿದರು. ಅದು ತನ್ನ ಕತೆಯಾಯಿತೇ ವಿನಾ ಸಾಹಿತ್ಯಜೀವನವಾಗಲಿಲ್ಲವೆಂದರು. (ತರಾಸು 'ನಾಗರಹಾವು' ಸಿನಿಮಾವನ್ನು ಕೇರೆಹಾವು ಎಂದದ್ದು ನೆನಪಾಯಿತು.) ಕೊನೆಗೆ 'ನೀವು ನನ್ನ ಎಲ್ಲ ಕೃತಿಗಳ ಕುರಿತು ಒಂದು ಪುಸ್ತಕವನ್ನು ಬರೆಯಬೇಕು, ನಾನು ಎಷ್ಟು ಕಾಲ ಇರುತ್ತೇನೋ ಗೊತ್ತಿಲ್ಲ, ಇದೊಂದು ಆಸೆಯಿದೆ' ಎಂದರು. ತಮ್ಮ ಅಷ್ಟೂ ಕೃತಿಗಳ ಒಂದೊಂದು ಪ್ರತಿಯನ್ನು ಮತ್ತೆ ಕಳಿಸಿದರು. 'ಸರಿ' ಎಂದೆ. 'ಈ ಮೂಲೆಯ ಮಡಿಕೇರಿಯಲ್ಲಿರುವ ನನಗೆ ನಿಮ್ಮಷ್ಟು ಸುಲಭದಲ್ಲಿ ಪ್ರಕಾಶಕರು ಸಿಗಲಿಕ್ಕಿಲ್ಲ, ನೀವೇ ಪ್ರಾಯೋಜಿಸಬೇಕಾದೀತು' ಎಂದು ಲಘುಧಾಟಿಯಲ್ಲಿ ಹೇಳಿದೆ. ಈವರೆವಿಗೂ ಬರೆಯಲಾಗಲಿಲ್ಲ. ಈಗ ಎರಡೆರಡು ಪ್ರತಿಗಳಿರುವ ಅವನ್ನು ಅಸ್ತವ್ಯಸ್ತವಾಗಿ ಜೊತೆಯಲ್ಲಿಟ್ಟು ನೋಡಿ ಸುಮ್ಮನಾಗುತ್ತೇನೆ. ವೈದ್ಯರ 'ಗಂಡಭೇರುಂಡ' ಕಥೆಯ ಕೊನೆಯಲ್ಲಿನ ಚಪ್ಪಲಿಗಳ ಹಾಗೆ ಅವೀಗ ಕಾಣಿಸುತ್ತಿವೆ. ಅಳುವುದಕ್ಕೆ ನನಗೆ ಕಾರಣಗಳಿವೆ. ನಾನು ಅಳುವುದಿಲ್ಲ. ಆದರೆ, ನಗುವುದೂ ಇಲ್ಲ. ವೈದ್ಯರು ಹಾಗಲ್ಲ; ಅಳುವುದಕ್ಕೆ ಕಾರಣಗಳಿದ್ದರೂ ನಗುತ್ತಲೇ ಬದುಕಿದವರು. ಬದುಕುವುದು ಹೇಗೆಂದು ಹೇಳಿಕೊಟ್ಟವರು.

●